ಸರಿಯಾಗಿ ನಡೆಸಿಕೊಂಡು ಹೋಗಲು ಅವಕಾಶ ಸಿಗುತ್ತದೆ. ತಾವೆಲ್ಲರೂ ನನಗೆ ಮಾರ್ಗದರ್ಶನ ಮಾಡಬೇಕೆಂದು ಹೇಳಿ ಈ ಸ್ಥಾನ ಸಿಗಲಿಕ್ಕೆ ಕಾರಣರಾದ ನಮ್ಮ ನಾಯಕರಿಗೆ ಮತ್ತು ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಗಮನ ಸೆಳೆಯುವ ಸೂಚನೆ

1. ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಮುಚ್ಚಿರುವ ಬಗ್ಗೆ

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಕಳೆದ ಎರಡೂವರೆ ವರ್ಷಗಳಿಂದ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಮುಚ್ಚಲ್ಪಟ್ಟಿದೆ ಆ ವಿಚಾರದ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡರವರು ನಮ್ಮ ಗಮನ ಸೆಳೆಯುವ ಸೂಚನೆ ತಂದಿದ್ದಾರೆ ಅದರ ಬಗ್ಗೆ ಈ ಕೆಳಕಂಡ ಹೇಳಿಕೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಭಾರತ ಸರ್ಕಾರದ ಕೈಗಾರಿಕಾ ಸಚಿವಾಲಯದ ನಿಯಂತ್ರಣದಲ್ಲಿರುವ ಹಿಂದೂಸ್ತಾನ್ ಪೇಪರ್ ಕಾರ್ಪೊರೇಷನ್ ಲಿಮಿಟೆಡ್‌ನ ಉಪ ಘಟಕ (ಸಬ್ಸಿಡಿಯರಿ) ಆಗಿರುತ್ತದೆ. ಕಾರ್ಖಾನೆಯ ಕಾರ್ಯಾಚರಣೆಯು ದಿನಾಂಕ 1.4.1993 ರಿಂದ ಸ್ಥಗಿತಗೊಂಡಿದೆ. ಈ ಪ್ರಕರಣವು ಬಿ.ಐ.ಎಫ್.ಆರ್. ಮುಂದೆ ಪ್ರಕರಣ ಸಂಖ್ಯೆ : 522:92 ರಲ್ಲಿ ದಿನಾಂಕ 7.7.1992 ರಂದು ನೋಂದಾಯಿಸಲಾಗಿದೆ ಮತ್ತು ಬಿ.ಐ.ಎಫ್.ಆರ್.ರವರು ಸದರಿ ಕಂಪನಿಯನ್ನು ದಿನಾಂಕ 15.12.1992 ರಂದು ಒಂದು ರೋಗಗ್ರಸ್ಥ ಕೈಗಾರಿಕಾ ಉದ್ದಿಮೆ ಎಂದು ಘೋಷಿಸಿರುತ್ತಾರೆ. ಕಾರ್ಖಾನೆಯ ಕಾರ್ಯಸಾಧ್ಯತೆ ಪರಿಶೀಲಿಸಲು ಮತ್ತು ಒಂದು ಪುನಶ್ಚೇತನ ಯೋಜನೆಯನ್ನು ತಯಾರಿಸಲು ಕೆನರಾ ಬ್ಯಾಂಕನ್ನು ಆಪರೇಟಿಂಗ್ ಏಜೆನ್ಸಿ ಎಂದು ನೇಮಿಸಲಾಗಿದೆ. ಈ ಕಾರ್ಖಾನೆಯ ಪುನಶ್ಚೇತನಗೊಳಿಸುವ ಪ್ರಸ್ತಾವನೆ ಬಿ.ಐ.ಎಫ್.ಆರ್. ಮುಂದೆ ಇದೆ. ರಾಜ್ಯ ಸರ್ಕಾರವು ಸದರಿ ಕಾರ್ಖಾನೆಯ ಪುನಶ್ಚೇತನಕ್ಕಾಗಿ ಪರಿಹಾರ ಮತ್ತು ರಿಯಾಯಿತಿಗಳನ್ನು ನೀಡಲು ಒಪ್ಪಿರುತ್ತದೆ.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರದ ಜನತೆಯ ಪ್ರಾಣ ರಕ್ಷಣೆಯ ವಿಷಯವಾಗಿದೆ. ಆದ್ದರಿಂದ ದಯಮಾಡಿ ತಾವು ಈ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಸಹಾಯ ಮಾಡಬೇಕು ಮತ್ತು ಈಗಾಗಲೇ ಅಲ್ಲಿ ಹತ್ತು ಸಾವಿರ ಅಂದರೆ ಒಂಭತ್ತು ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಅವರ ಕುಟುಂಬ, ಅವರ ಹೆಂಡತಿ ಮಕ್ಕಳು ಸೇರಿಸಿದರೆ ಹತ್ತು ಸಾವಿರ ಜನರು ಆಗುತ್ತಾರೆ. ಆದ್ದರಿಂದ ದಯಮಾಡಿ ಈ ಫ್ಯಾಕ್ಟರಿಯನ್ನು ಓಪನ್ ಮಾಡಿ. ಆ ಜನರ ಅನುಕೂಲಕ್ಕಾಗಿ ಉದ್ಯೋಗಕ್ಕಾಗಿ ತಾವು ದಯಮಾಡಿ ಸಹಾಯ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಈ ಒಂದು ಕಾರ್ಖಾನೆಯ ವಿಚಾರದಲ್ಲಿ ತಮ್ಮ ಅಪ್ಪಣೆಯನ್ನು ಪಡೆದು ಇದರ ಚರಿತ್ರೆಯನ್ನು ಸ್ವಲ್ಪ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನನ್ನ ಸುದೈವ. ಇಂದು ಈ ಸದನದಲ್ಲಿ ನಾನು ಮೇಲ್ಮನೆಯಲ್ಲಿ ಈ ವಿಚಾರವನ್ನು ಹಲವಾರು ಬಾರಿ ಪ್ರಸ್ತಾಪ ಮಾಡಿದಾಗ ಕಿಂಚಿತ್ತಾದರೂ ಸಹಾಯಕ್ಕೆ ಬಂಧಂಥ ಈರ್ವರೂ ಮಾಜಿ ಮುಖ್ಯಮಂತ್ರಿಗಳು ನಮ್ಮ ಮುಂದೆ ಇದ್ದಾರೆ. ಮೊದಲಿಗೆ ಶ್ರೀಮಾನ್ ಬಂಗಾರಪ್ಪನವರು ಈ ಕಾರ್ಖಾನೆಗೆ ಕಚ್ಚಾ ಮಾಲು ಏನು ಬೇಕಾಗಿತ್ತೋ ಬೆಗಾಸ್ ಎನ್ನತಕ್ಕಂಥದ್ದು. ಕಚ್ಚಾ ವಸ್ತು ಬೆಗಾಸ್‌ನ್ನು ಉಪಯೋಗಿಸಿಕೊಂಡು ಕಾಗದದ ಕಾರ್ಖಾನೆ ನಡೆಯುತ್ತಿರುವುದು ಇದು ಇಡೀ ಭಾರತದಲ್ಲೇ ಪ್ರಥಮ.

ನಮ್ಮ ಜಿಲ್ಲೆಯಲ್ಲಿರತಕ್ಕಂಥ ಒಂದು ಸಂಸ್ಥೆ. ಸುಮಾರು ಸಾವಿರ ಕುಟುಂಬ ಇದನ್ನು ನಂಬಿರುವಂಥದ್ದು. ಇದನ್ನು ನಂಬಿಕೊಂಡು ಸುಮಾರು 50-60 ಸಣ್ಣ ಕೈಗಾರಿಕಾ ಘಟಕಗಳು ಕೂಡ ಇದರ ಮೇಲೆ ನಿಂತಿವೆ. ಅಂದಿನ ಒಂದು ಪರಿಸ್ಥಿತಿಯಲ್ಲಿ ಏನು ಹೊರರಾಜ್ಯದಿಂದ ಕಬ್ಬಿನ ಬೆಗಾಸ್ ಕಬ್ಬಾ ಮಾಲನ್ನು ತರುತ್ತಿರುವಂಥ ಪರಿಸ್ಥಿತಿ ಇತ್ತೋ, ಆ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಕಾರ್ಖಾನೆಗೆ ಸಮೀಪ ಇರತಕ್ಕಂಥ ಮಂಡ್ಯ ಜಿಲ್ಲೆ, ಮೈಸೂರು ಜಿಲ್ಲೆಯ ಸಕ್ಕರೆ ಕಾರ್ಖಾನೆಗಳನ್ನು ಅಲ್ಲಿ ಕಬ್ಬಾಮಾಲನ್ನು ನೀವು ಮಾಡಬೇಕು ಎನ್ನತಕ್ಕಂಥ ಕರಾರನ್ನು ಮಾಡಿ, ಅದರ ಮೇಲೆ ಇದ್ದಂಥ ತೆರಿಗೆಯನ್ನು ಸ್ವಲ್ಪ ಕಡಿಮೆ ಮಾಡಿರುವಂಥದ್ದು ಸನ್ಮಾನ್ಯ ಬಂಗಾರಪ್ಪನವರಿಗೆ ಮೊದಲು ಸಲ್ಲುತ್ತದೆ. ನಂತರ ಸನ್ಮಾನ್ಯ ವೀರಪ್ಪಮೊಯಿಲಿಯವರು ಕಳೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಂಡ್ಯ ಜಿಲ್ಲೆಗೆ ಬಂದಾಗ, ಆ ದಿವಸ ಕಾರ್ಖಾನೆ ಮುಚ್ಚಿತ್ತು. ಅದಕ್ಕೆ ನಾನು ಈ ಬೇಡಿಕೆಯನ್ನು ಜಿಲ್ಲೆಯ ಪರವಾಗಿ ಮಾಡಿದಂಥ ಸಂದರ್ಭದಲ್ಲಿ ಶ್ರೀಮಾನ್ ಲಿನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು. ಇದರ ಕಥೆ ಏನು ಎನ್ನುವುದಕ್ಕೆ ಹಿನ್ನೆಲೆಯನ್ನು ಹೇಳಬೇಕಾದ್ದು ಇವತ್ತು ಅನಿವಾರ್ಯ. ಇದನ್ನು ನಂಬಿ ಏನು 50 ಕೈಗಾರಿಕಾ ಘಟಕಗಳು ಮಂಡ್ಯ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯಲ್ಲಿ ಇವೆಯೋ, ಇವಕ್ಕೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಸಾಲ ಕೊಟ್ಟಿರುವಂಥದ್ದು ಎಂ.ಎನ್.ಪಿ.ಎಂ. ಆಸ್ಸಿಲಿಯರಿ ಸ್ಟೇಟಸ್ ಕೊಡುತ್ತದೆ ಎನ್ನುವ ಕಾರಣದಿಂದ. ಎಂ.ಎನ್.ಪಿ.ಎಂ. ನವರು ಇಂಟರ್‌ವ್ಯೂ ಕರೆದಿದ್ದರು 40-50 ಘಟಕಗಳಿಗೆ. ಹೆಣ್ಣು ಮಕ್ಕಳು, ಇಂಜಿನಿಯರಿಂಗ್ ಪದವೀಧರರು ಅದರಲ್ಲಿ ಪಾಲ್ಗೊಂಡರು. ಅವರಿಗೆ ಕೆ.ಎಸ್.ಎಫ್.ಸಿ.ಯವರು ಕಮಿಟ್‌ಮೆಂಟ್ ಲೆಟರನ್ನು ಎಂ.ಎನ್.ಪಿ.ಎಂ.ಯಿಂದ ನಾವು ಇದಕ್ಕೆ ಸಾಲ ಕೊಡುತ್ತೇವೆ ಎಂದು ಹೇಳಿ ಲಕ್ಷಾಂತರ ರೂಪಾಯಿ ಸಾಲವನ್ನು ಕೊಟ್ಟರು. ಆ ಕಾರ್ಖಾನೆಗಳು ಪ್ರಾರಂಭವಾಗತಕ್ಕಂಥ ಸನ್ನಿವೇಶ ಬಂದಾಗ ಈ ಕಾರ್ಖಾನೆ ಎಂ.ಎನ್.ಪಿ.ಎಂ. ಮುಚ್ಚಿಹೋಯಿತು. ಏತಕ್ಕೆ ಹಿನ್ನೆಲೆಯನ್ನು ನಾನು ಹೇಳುತ್ತಿದ್ದೇನೆ ಎಂದರೆ ಇದು ಕೇಂದ್ರಸರ್ಕಾರದ್ದೇ ಆಗಿದ್ದರೂ ಕೂಡ ಇರತಕ್ಕಂಥದ್ದು ನಮ್ಮ ರಾಜ್ಯದಲ್ಲಿ ಇದು ನಮ್ಮ ಜಿಲ್ಲೆಯ ಆಸ್ತಿ.

ಅದನ್ನು ತಾವು ಉಳಿಸಿಕೊಳ್ಳಬೇಕಾದರೆ ಏನು ಹಿಂದಿನ ಸರ್ಕಾರ ಈ ನಿಟ್ಟಿನಲ್ ಪ್ರಾಮಾಣಿಕ ಪ್ರಯತ್ನ ಮಾಡಿತ್ತೋ, ನಮ್ಮ ಲೋಕಸಭಾ ಸದಸ್ಯರು ಪಾರ್ಲಿಮೆಂಟ್‌ನಲ್ಲಿ ಇದನ್ನು ರಾಜ್ಯ ಸರ್ಕಾರಕ್ಕೆ ರೆಫರ ಮಾಡಿ ಒಂದು ಮೀಟಿಂಗ್ ನಡೆದಿದೆ. ಇದರ ಚರಿತ್ರೆಯನ್ನು ಪೂ ತರಿಸಿಕೊಳ್ಳಿ. ಎಂಪ್ಲಾಯೀಸ್ ಇದಕ್ಕೆ ಪ್ರಪೋಸಲ್ಸ್ ಕೊಟ್ ಸಂಬಳ ಬಿಡುತ್ತೇವೆ, ಪ್ರಮೋಷನ್ ಬೇಡ, ಬೋನಸ್ ಬೇಡ. ನಮ್ಮ ಕಾರ್ಖಾನೆ ಪ್ರಾರಂಭ ಮಾಡಿಕೊಡಿ ಎನ್ನತಕ್ಕಂಥ ಒಂದು ಪ್ರಪೋಸಲ್ಸ್‌ನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ತಾವು ಸಾರ್ವಜನಿಕ ಸಮಿತಿಯ ಉದ್ಯಮ ಸಮತಿಯ ಅಧ್ಯಕ್ಷರಾಗಿ ಒಂದು ವರದಿಯನ್ನು ಬರೆದಿರುವುದನ್ನು ನಾನು ಆ ಸಮಿತಿಯ ಸದಸ್ಯನಾಗಿ ಓದಿದ್ದೇನೆ. ಏನು ಮಂಡ್ಯ ಷುಗರ್ ಫ್ಯಾಕ್ಟರಿ, ಮೈಸೂರು ಷುಗರ್ ಫ್ಯಾಕ್ಟರಿ ಇದೆ, ಇದನ್ನು ಬೆಗಾಸ್‌ಕ್ಕೋಸ್ಕರ ಲಿಂಕ್ ಮಾಡಬೇಕು ಎಂದು ತಾವೇ ಪ್ರಪೋಸಲ್ಸ್ ಕೊಟ್ಟಿದ್ದೀರಿ. ನಾನು ತಮಗೆ ಜ್ಞಾಪಕ ಮಾಡಿಕೊಳ್ಳುತ್ತೇನೆ. ಇವತ್ತು ಸುದೈವ. ತಾವು ಆ ಸ್ಥಾನದಲ್ಲಿದ್ದೀರಿ. ಈರ್ವರೂ ಮಾಜಿ ಮುಖ್ಯಮಂತ್ರಿಗಳಿದ್ದಾರೆ. ಇವತ್ತು ನಮ್ಮ ಸರ್ಕಾರ ಇದ ಸನ್ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ನಿಟ್ಟಿನಲ್ಲಿ ಕಾರ್ಖಾನೆಯನ್ನು ಪುನರಾರಂಭ ಮಾಡುವುದಕ್ಕೆ ಪ್ರಯತ್ನ ಲಕ್ಷ ರೂಪಾಯಿಯನ್ನು ಅವರು ಕೇಳಿದ್ದರು. ಯಾವುದೋ ಒಂದು ಮೆಷಿನರಿಯನ್ನು ಆಪರೇಟ್ ಮಾಡುತ್ತೇವೆ. ನಾವು ಮಾಡಿ ಚಾಲನೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದರು. ಆ ಇಡೀ ಕಡತವನ್ನು ತರಿಸಿಕೊಳ್ಳಬೇಕು. ಶ್ರೀಮಾನ್ ಲಿನ್‌ರವರ ನೇತೃತ್ವದಲ್ಲಿ ಏನು ಸಮಿತಿಯನ್ನು ಹಿಂದಿನ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ವೀರಪ್ಪಮೊಯಿಲಿಯವರ

ಕಾಲದಲ್ಲಿ ಮಾಡಿದ್ದರು ಅದನ್ನು ಪೂರ ಪರಿಶೀಲನೆ ಮಾಡಬೇಕು. ಒಟ್ಟಿನಲ್ಲಿ ನಮಗೆ ಬೇಕಾಗಿರುವುದು ಇಷ್ಟು ಇವತ್ತು ನಾವು ವಿದೇಶಿ ಬಂಡವಾಳ ತಂದು ನಮ್ಮ ರಾಜ್ಯದಲ್ಲಿ ಹರಾಡಿ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಪ್ರಾರಂಭ ಮಾಡಿ, ಸಣ್ಣ ಕೈಗಾರಿಕೆಯನ್ನು ತೆಗೆಯಿರಿ ಎಂದು ಪ್ರೋತ್ಸಾಹ ಕೊಡುವುದು ಒಂದು ಕಡೆಯಾದರೆ ಮುಚ್ಚಿರತಕ್ಕಂಥ ಕಾರ್ಖಾನೆಗಳಿಗೆ ಪುನಶ್ಚೇತನ ಕೊಡುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡದಿದ್ದರೆ ಬೇರೆ ಯಾರೂ ಕೂಡ ಬಂದು ನಮ್ಮ ರಾಜ್ಯದಲ್ಲಾಗಿ ಇದನ್ನು ಕೈಗೆ ಎತ್ತಿಕೊಳ್ಳತಕ್ಕಂಥ ಪ್ರಸಂಗ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ, ದಯಮಾಡಿ ಇದಕ್ಕೆ ಸುದೀರ್ಘವಾದಂಥ ಒಂದು ಆಶಾದಾಯಕವಾದಂಥ ಭರವಸೆಯ ರೂಪದ ಉತ್ತರವನ್ನು ಕೊಡಬೇಕು. ಏಕೆಂದರೆ ಇದು ಹಲವಾರು ಬಾರಿ ಪ್ರಸ್ತಾಪವಾಗಿ ಹೋಗಿದೆ. ನನಗಂತೂ ನಂಬಿಕೆಯಿಲ್ಲ. ಆ ಎಂ.ಎನ್.ಪಿ.ಎಂ. ಪ್ರಾರಂಭವಾಗುತ್ತೋ ಇಲ್ಲವೋ ಎಂದು ಹೇಳಿ. ಜೊತೆಗೆ ಮತ್ತೊಂದು ತಮ್ಮ ಮೂಲಕ ಭಾರೀ ಕೈಗಾರಿಕಾ ಸಚಿವರಲ್ಲಿ ಹೇಳುವುದು ಇಷ್ಟೆ. ಏನು ಈ ಕಾರ್ಖಾನೆಯನ್ನು ನಂಬಿ 40-50 ಸಣ್ಣ ಕೈಗಾರಿಕೆಗಳು ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ನಿಂತಿವೆಯೋ ಅವಕ್ಕೆ ರಾಜ್ಯಸರ್ಕಾರ ಕರ್ನಾಟಕ ರಾಜ್ಯ ಹಣಕಾಸ ಸಂಸ್ಥೆಯಿಂದ ಕೊಟ್ಟಿರತಕ್ಕಂಥ ಸಾಲ ಅದನ್ನ ರೀಷೆಡ್ಯೂಲ್ ಮಾಡಬೇಕು. ಜೊತೆಗೆ ಬಡ್ಡಿ ರಿಯಾಯಿತಿ ಕೊಡಬೇಕ. ಅವರು ನಷ್ಟ ಅನುಭವಿಸಿದ್ದರೆ ಈ ಕಾರ್ಖಾನೆ ಮುಚ್ಚಿದ್ದರಿಂದ ಎಂದು ತಿಳಿದುಕೊಳ್ಳಬೇಕು. ಇದರ ಬಗ್ಗೆ ಸವಿಸ್ತಾರವಾಗಿ ಉತ್ತರ ಕೊಡಬೇಕು ಎನ್ನುವ ಮಾತನ್ನು ಹೇಳಿ ಸನ್ಮಾನ್ಯ ಹಣಕಾಸಿನ ಸಚಿವರು ಇದ್ದಾರೆ, ಈ ಹಣ ಕೊಡುವ ವಿಚಾರದಲ್ಲಿ ನಿಮ್ಮ ಜಿಲ್ಲೆಗೂ ಕೂಡ ಇದು ಬರುತ್ತದೆ. ಆ ಒಂದು ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಇದರ ಬಗ್ಗೆ ಒಂದು ವಿಚಾರ ಹೇಳುವುದಕ್ಕೆ ನಾನೂ ಸಹ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ತಾವು ಹೊಸ ಸದಸ್ಯರು ಇದ್ದೀರಿ. ಕಾಲ್ ಅಟೆನ್‌ಷನ್‌ಗೆ ಯಾರು ಸಿಗ್ನೇಟರೀಸ್ ಇರುತ್ತಾರೆ, ಅವರು ಮಾತ್ರ ಮಾತನಾಡಬೇಕು. ಇನ್ನೊಂದು ಸಂದರ್ಭದಲ್ಲಿ ಅವಕಾಶ ಮಾಡಿಕೊಡುತ್ತೇನೆ.

+ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಾದ ಶಿವಕುಮಾರ್ ಅವರು, ಅಕ್ಕನವರಾದ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ ಅವರು ಈ ಕೈಗಾರಿಕೆ ಪುನಃ ಪ್ರಾರಂಭ ಮಾಡುವ ಬಗ್ಗೆ ಕೆಲವು ಸಲಹೆ ಕೊಟ್ಟಿದ್ದಾರೆ. ಮತ್ತು ಶಿವಕುಮಾರ್ ಅವರು ನಾನು ಏನು ಉತ್ತರ ಕೊಡಬೇಕಿತ್ತು. ಅದರ ಬಗ್ಗೆ ಅವರೇ ಸಂಪೂರ್ಣವಾದ ಮಾಹಿತಿ ಹಾಗೂ ಚಿತ್ರ ಕೊಟ್ಟಿದ್ದಾರೆ. ಮುಖ್ಯವಾಗಿ ಈ ಕೈಗಾರಿಕೆ ಮೇಲೆ ರಾಜ್ಯ ಸರ್ಕಾರದ ಯಾವ ಹತೋಟಿಯೂ ಇಲ್ಲ, ಇದು ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಏನು ಇದೆ, ಅಅದರ ಸಬ್ಸಿಡಿಯರಿ ಇದು. ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಈಗಾಗಲೆ ನಾನು ಹೇಳಿದ ಹಾಗೆ ಈ ಕೈಗಾರಿಕೆ 1.4.93 ರಿಂದ ಮುಚ್ಚಿದೆ. ಹಲವಾರು ಕಾರಣಗಳು ಇವೆ ಮತ್ತು ಬಿಐಎಫ್‌ಆರ್‌ನಲ್ಲಿ ಸಹ ರಿಜಿಸ್ಟರ್ ಆಗಿದೆ. ರಾಜ್ಯ ಸರ್ಕಾರ ಈ ಕೈಗಾರಿಕೆ ಪುನಃ ಪ್ರಾರಂಭ ಆಗಬೇಕು, ಅಲ್ಲಿದ್ದ ಕಾರ್ಮಿಕರು ಮತ್ತು ಅಲ್ಲಿದ್ದ ಸುತ್ತಮುತ್ತಲ ಕೈಗಾರಿಕೆಗಳು ಏನು ಇದ್ದಾವೆ ಅದರ ಮೇಲೆ ಪರಿಣಾಮ ಆಗಬಾರದು ಎಂಬ ಉದ್ದೇಶದಿಂದ ಹಲವಾರು ರಿಯಾಯಿತಿಗಳನ್ನು ಕೊಟ್ಟಿತು. ವಿದ್ಯುಚ್ಛಕ್ತಿ ವಿಚಾರದಲ್ಲಿ ಇರಬಹುದು, ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ

ನಾವು ಬಿಐಎಫ್‌ಆರ್ ಮುಂದೆ ಅಫಿಡವಿಟ್ ಸಹ ಮಾಡಿದ್ದೇವೆ. ಈಗ ಈ ವಿಚಾರ ಬಿಐಎಫ್‌ಆರ್ ಮುಂದೆ ಇದೆ, ಅಷ್ಟೇ ಅಲ್ಲ ಕೇಂದ್ರ ಸರ್ಕಾರದವರೂ ಸಹ ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆಂದು ಕೇಳಿ ಬಂದಿರುತ್ತದೆ. ಆ ಶಿಫಾರಸ್ಸುಗಳು ಇನ್ನೂ ರಾಜ್ಯ ಸರ್ಕಾರದ ಗಮನಕ್ಕೆ ಬಂದಿಲ್. ಹಾಗಾಗಿ ಸಹಕಾರವನ್ನ್ ನಾವು ಕೊಟ್ಟಿದ್ದೇವೆ. ಇನ್ನು ಮುಂದೆ ಸಹ ಸಹಕಾರವನ್ನು ನಾವು ಕೊಡುತ್ತೇವೆ ಎಂಬ ಭರವಸೆಯನ್ನು ನಾನು ಸದನಕ್ಕೆ ಮತ್ತು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಬಯಸುತ್ತೇನೆ. ಅಷ್ಟೇ ಅಲ್ಲ, ಈಗಾಗಲೇ ಹೇಳಿದ ಹಾಗೆ ಇದು ಕೇಂದ್ರ ಸರ್ಕಾರದ ಕೈಗಾರಿಕೆ ಮೂಲಕ ಕೇಂದ್ರ ಸರ್ಕಾರದ ಮೇಲೆ ಸಂಪೂರ್ಣವಾದ ಒತ್ತಡವನ್ನು ತಂದು ಅವರ ಸಹಕಾರದಿಂದ, ಅವರ ಸಂಪರ್ಕ ಸಾಧಿಸಿ ಆದಷ್ಟು ಬೇಗನೆ ಈ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇಷ್ಟು ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ತಮ್ಮಮೂಲಕ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಕಾಲವನ್ನು ನಿಗದಿ ಮಾಡಬೇಕಾಗುತ್ತದೆ. ಜನವರಿಯಿಂದಲೇ ಪ್ರಾರಂಭ ಮಾಡುತ್ತೇವೆ, ಡಿಸೆಂಬರ್‌ನಲ್ಲಿ ಪ್ರಾರಂಭ ಮಾಡುತ್ತೇವೆ ಎಂಬ ಸುದ್ದಿ ಹಿಂದೆ ಬಂದಿತ್ತು. ದಯಮಾಡಿ ತಮಗೆ ನಾನು ಕೇಳಿಕೊಳ್ಳುವುದು ಕಾಲಾವಕಾಶವನ್ನು ತಾವು ಯಾವಾಗ ಮಾಡುತ್ತೀರಿ? ಎಷ್ಟು ದಿವಸದಲ್ಲಿ ಮಾಡುತ್ತೀರಿ ಎನ್ನತಕ್ಕದ್ದು ಬೇಕು. ಏಕೆಂದರೆ ಡಿಸೆಂಬರ್‌ನಲ್ಲಿ ಮಾಡುತ್ತೇವೆ ನವೆಂಬರ್‌ನಲ್ಲಿ ಮಾಡುತ್ತೇವೆಂದು ಹೇಳಿ ಈಗ ಮುಂದಿನ ಜನವರಿಯಲ್ಲಿ ಪ್ರಾರಂಭ ಮಾಡುತ್ತೇವೆ ಎಂಬ ಪ್ರಸ್ತಾಪನೆ ಬಂದಿತ್ತು. ಈಗ ಪೂರ್ತಿ ನಂಬಿಕೆ ಹೊರಟು ಹೋಗಿದೆ ಅದರ ಬಗ್ಗೆ ನಮಗೆ ನಿಜವಾಗಿ ನಂಬಿಕೆ ಇಲ್ಲ, ಎಷ್ಟು ದಿವಸ ತಾವು ತೆಗೆದುಕೊಳ್ಳುತ್ತೀರಿ? ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಏಕೆಂದರೆ ಹಣಕಾಸು ಸಚಿವರು ಪಕ್ಕದಲ್ಲಿ ಇದ್ದಾರೆ. ಅವರು ಯಾವಾಗ ವಿದ್ಯುಚ್ಛಕ್ತಿ ರಿಯಾಯಿತಿಗೆ ಹಣ ಕೊಡುತ್ತಾರೆ; ಅದನ್ನು ರೀಹ್ಯಾಬಿಲಿ ಟೇಟ್ ಮಾಡುವುದಕ್ಕೆ ಏನು ದುಡ್ಡು ಕೊಡುತ್ತಾರೆ, ಅದನ್ನು ಯಾವಾಗ ಕೊಡುತ್ತಾರೆ ಎಂಬ ಬಗ್ಗೆ ಕಾಲಾವಕಾಶ ಹೇಳದೆ ನಾವು ಮಾಡುತ್ತೇವೆ ಎಂದು ಹೇಳಿದರೆ ಹೇಗೆ? ಅದಕ್ಕೆ ಕಾಲಾವಕಾಶ ಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಈಗಾಗಲೇ ಹೇಳಿದ್ದೇನೆ. ಇದು ಕೇಂದ್ರ ಸರ್ಕಾರದ ಕೈಗಾರಿಕೆ. ನಮ್ಮ ಕೈಯಲ್ಲಿ ಇದ್ದಿದ್ದರೆ ನಾವು ಹೇಳುತ್ತಿದ್ದವು. ನಾವು ಇವತ್ತು ಪ್ರಾರಂಭ ಮಾಡುತ್ತೇವೆ ಇಲ್ಲ ನಾಳೆ ಪ್ರಾರಂಭ ಮಾಡುತ್ತೇವೆ ಎಂದು. ಒಂದು ತಿಂಗಳಲ್ಲಿ ಮಾಡುತ್ತೇವೆ ಎಂದು. ಆದರೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಮಂಡ್ಯ ಜಿಲ್ಲೆಯ ಎಲ್ಲಾ ಶಾಸಕರ ಸಹಕಾರದಿಂದ ನಾನು ಆದಷ್ಟು ಬೇಗನೆ ಕೇಂದ್ರ ಸರ್ಕಾರದ ಸಂಪರ್ಕ ಸಾಧಿಸಿ ಈ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಕೆನರಾ ಬ್ಯಾಂಕ್ ಅನ್ನು ಅಪರೇಟಿಂಗ್ ಏಜೆನ್ಸಿ ಎಂದು ಬಿಐಎಫ್‌ಆರ್‌ನವವು ಅಪಾಯಿಂಟ್ ಮಾಡಿದ್ದಾರೆ. ಇವತ್ತು ಈ ಕೈಗಾರಿಕೆಯನ್ನು ಪುನಃ ಪ್ರಾರಂಭ ಮಾಡಬೇಕಾದರೆ ನನಗೆ ಬಂದ ಇನ್‌ಫರ್ಮೇಷನ್ ಪ್ರಕಾರ ಕನಿಷ್ಟ 40 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಇನ್‌ವೆಸ್ಟಮೆಂಟ್ ಮಾಡಬೇಕಾಗುತ್ತದೆ.

ಈ ಕೈಗಾರಿಕೆಯನ್ನು ರಾಜ್ಯ ಸರ್ಕಾರ ಏಕೆ ಸ್ಥಾಪಿಸಬಾರದೆಂದು ಮಾನ್ಯ ಪ್ರಧಾನಿಯವರು ಪತ್ರ ಬರೆದು ತಿಳಿಸಿದ್ದರು. ಆದರೆ, ಆ ಸಮಯದಲ್ಲಿ ರಾಜ್ಯ ಸರ್ಕಾರವೂ ಸಹ ಈ ಕೈಗಾರಿಕೆ ಪತ್ರ ಬರೆದು ತಿಳಿಸಿದ್ದರು. ಆದರೆ, ಆ ಸಮಯದಲ್ಲಿ ರಾಜ್ಯ ಸರ್ಕಾರವೂ ಸಹ ಈ ಕೈಗಾರಿಕೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದೆ. ಮತ್ತು ಈ ಕುರಿತು ನನ್ನ ಸ್ಪಷ್ಟವಾದ ವಿಚಾರವೇನೆಂದರೆ,

ರಾಜ್ಯ ಸರ್ಕಾರದ ಆಧೀನದಲ್ಲಿರುವ ಯಾವ್ಯಾವ ಉದ್ದಿಮೆಗಳು ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆಯೋ ಅದಕ್ಕೆ ಚೆನ್ನಾಗಿ ಉತ್ತೇಜನ ಕೊಡುತ್ತೇವೆ, ಎಲ್ಲಿ ಉದ್ದಿಮೆಗಳು ರೋಗಗ್ರಸ್ತವೆಂದು ತಿಳಿದುಬರುತ್ತದೆಯೋ ಅಲ್ಲಿ ಪುನಶ್ಚೇತನಗೊಳಿಸುವುದಕ್ಕೆ ಪ್ರಯತ್ನಿಸುತ್ತೇವೆ. ಆದರೆ, ಬ್ಲೇಡು, ಸೋಪುಗಳನ್ನು ತಯಾರಿಸುವ ಕೆಲಸ ಸರ್ಕಾರದ್ದಲ್ಲವೆಂದು ನಾನು ಭಾವಿಸಿದ್ದೇನೆ. ಮತ್ತೊಂದು ವಿಚಾರ ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವಂತೆ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಕೆನರಾ ಬ್ಯಾಂಕ್‌ನವರನ್ನು ಆಪರೇಟಿಂಗ್ ಏಜೆನ್ಸಿ ಬಿ.ಐ.ಎಫ್.ಆರ್.ನವರು ನೇಮಿಸಿದ್ದು; ಅಲ್ಲಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನವರೂ ಈ ಕಾರ್ಖಾನೆಯನ್ನು ಟೇಕ್ ಓವರ್ ಮಾಡುತ್ತೇವೆಂಬ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಅದೂ ಸಹ ಅವರ ಪರಿಶೀಲನೆಯಲ್ಲಿದೆ.

ಶ್ರೀ ಜಿ.ಬಿ. ಶಿವಕುಮಾರ್ : ಬಿಐಎಫ್‌ಆರ್‌ನವರು ಜನವರಿ 5ನೇ ತಾರೀಖಿನವರೆಗೆ ಗಡುವು ಕೊಟ್ಟಿದ್ದಾರೆ. ಅದನ್ನು ತೆರೆಯುವುದಕ್ಕೆ ತಾವು ಸರ್ಕಾರದ ವತಿಯಿಂದ ಚರ್ಚೆ ಮಾಡಿ ನಿರ್ಣಯ ತೆಗೆದುಕೊಂಡರೆ ಒಂದು ಕಾಲಾವಧಿ ಕೊಟ್ಟಂತಾಗುತ್ತದೆ. ಅದೇ ರೀತಿ ಮರ್ಜಿ ಪಿಟಿಷನ್‌ನ ಡೆತ್ ಸಂಟೆನ್ಸ್ ಮುಂದೆ ಹೋಗುವಂತೆ ಕ್ರಮ ತೆಗೆದುಕೊಳ್ಳಬೇಕು. ಕಾಲಾವಧಿ ವಿಸ್ತರಿಸಿದರೆ ಸರ್ಕಾರ ಇದರ ಬಗ್ಗೆ ಮುಕ್ತ ಮನಸ್ಸು ಹೊಂದಿದೆ ಎನ್ನುವ ಭಾವನೆ ತಳಿದಂತಾಗುತ್ತದೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ರಾಜ್ಯ ಸರ್ಕಾರದಿಂದ ಯಾವುದೇ ರೀತಿ ವಿಳಂಬವಾಗಿಲ್ಲ. ಅಫಿಡವಿಟ್ ಫೈಲ್ ಮಾಡಿದ್ದು ಕನ್‌ಸೆಷನ್ ಕೊಡುತ್ತೇವೆಂದು ಹೇಳಿದ್ದೇವೆ. ಈಗ ಮತ್ತೆ ಮಾನ್ಯ ಸದಸ್ಯರ ಜೊತೆ ಚರ್ಚಿಸಿ ರಾಜ್ಯ ಸರ್ಕಾರದ ಕಡೆಯಿಂದ ಹೆಚ್ಚಿನ ಪ್ರಭಾವ, ಒತ್ತಡ ಏನು ತರಬೇಕಾಗಿದೆಯೋ ಆ ದಿಸೆಯಲ್ಲಿ ಕೆಲಸ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

2. **ರಾಜ್ಯದಲ್ಲಿ ಒಂದಂಕಿ ಲಾಟರಿ ಟಿಕೇಟನ್ನು ರದ್ದುಗೊಳಿಸುವ ಕುರಿತು.**

ಶ್ರೀ ಶ್ಯಾಮನೂರು ಶಿವಶಂಕರಪ್ಪ (ದಾವಣಗೆರೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಒಂದಂಕಿ ಲಾಟರಿಯಿಂದ ಲಕ್ಷಾಂತರ ಬಡ ಕುಟುಂಬಗಳು ಬೀದಿಪಾಲಾಗಿರುವುದರಿಂದ ಹಾಗೂ ಹಲವಾರು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಒಂದಂಕಿ ಲಾಟರಿಯನ್ನು ಕೂಡಲೇ ರದ್ದುಗೊಳಿಸುವ ಬಗ್ಗೆ ನಾನು ಮಾನ್ಯ ಹಣಕಾಸು ಹಾಗೂ ಯೋಜನಾ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಶ್ಯಾಮನೂರು ಶಿವಶಂಕರಪ್ಪ ಮತ್ತು ಹೆಚ್. ಶಿವಪ್ಪನವರು ಸರ್ಕಾರದ ಗಮನವನ್ನು ಏನು ಸೆಳೆದಿದ್ದಾರೆ. ಈ ಕುರಿತ ಹೇಳಿಕೆಯನ್ನು ತಮ್ಮ ಅನುಮತಿ ಪಡೆದು ಓದುತ್ತೇನೆ.

ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದು 1969-70 ರಿಂದ ಕರ್ನಾಟಕ ರಾಜ್ಯ ಲಾಟರಿಯನ್ನು ಆರಂಭಿಸಲಾಗಿದೆ. ಈ ಲಾಟರಿಯನ್ನು ರಾಜ್ಯ ಸರ್ಕಾರವೇ ನೇರವಾಗಿ ವ್ಯವಸ್ಥೆಗೊಳಿಸಿ ನಡೆಸುತ್ತಿದೆ. ಲಾಟರಿಯ ಟಿಕೇಟುಗಳು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ಮಾರಾಟ ಮಾಡಲ್ಪಡುತ್ತಿವೆ. ಟಿಕೇಟುಗಳ ಮುದ್ರಣದಲ್ಲಿ ಯಾವುದೇ ಲೋಪ ಬಾರದಂತೆ ನೋಡಿಕೊಳ್ಳಲು ಅವುಗಳನ್ನು ಸೆಕ್ಯೂರಿಟಿ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತಿದೆ. ಸರ್ಕಾರದಿಂದ ನೇಮಕಗೊಂಡ ಸಮಿತಿಯ ಉಸ್ತುವಾರಿಯಲ್ಲಿ ಲಾಟರಿಯ ಡ್ರಾಗಳನ್ನು ನಡೆಸಲಾಗುತ್ತಿದೆ. ಹೀಗೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಕರ್ನಾಟಕ ರಾಜ್ಯ ಲಾಟರಿಯಲ್ಲಿ ಯಾವುದೇ ದುರ್‌ವ್ಯವಹಾರಕ್ಕೆ